# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.22/2021**

**ದೋ.ಸಾ. : 42 ಫ್ರಾ.ಸಾ. : 18**

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ವಿಜಯಾ ಪಿ. ಎಂ. |
| ತಂದೆಯ ಹೆಸರು | : | ಶಿವಾನಂದ ಸ್ವಾಮಿ |
| ವಯಸ್ಸು | : | 51 ವರ್ಷ |
| ಕೆಲಸ | : | ಅಸೋಸಿಯೇಟ್ ಪ್ರೊಫೆಸರ್, ಕ್ರಿಮ್ಸ್ ಕಾರವಾರ |
| ವಾಸ | : | ಕಾರವಾರ |

**ದಿನಾಂಕಃ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ನಾನು ಕಳೆದ 10 ವರ್ಷಗಳಿಂದ ಕಾರವಾರದ ಕ್ರಿಮ್ಸ್ ಆಸ್ಪತ್ರೆಯ ಪೆಥೊಲೊಜಿ ವಿಭಾಗದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ.15-05-2021 ರಂದು ಹೊನ್ನಾವರದ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಿಂದ ಕಾರವಾರದ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮುಖ್ಯಸ್ಥರಿಗೆ ಕೋರಿಕೆ ಪತ್ರ ಬಂದಿದ್ದು, ಸದರಿ ಕೋರಿಕೆಯಲ್ಲಿ ಕುಮಟಾ ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಈ ಪ್ರಕರಣದ ಮೃತ ಅಬು ತಾಲೀಬ್‌ನ ಮರಣೋತ್ತರ ಪರೀಕ್ಷೆಯ ಕಾಲಕ್ಕೆ ಸಂಗ್ರಹಿಸಿದ ಹೃದಯವನ್ನು ಪರೀಕ್ಷೆಗೊಳಪಡಿಸಿ, ಸದರಿ ವ್ಯಕ್ತಿಯ ಮರಣದ ಪೂರ್ವದಲ್ಲಿ ಆತನ ಹೃದಯಕ್ಕೆ ಆದ ಗಾಯದ ಬಗ್ಗೆ ಪ್ರಮಾಣ ಪತ್ರ ನೀಡುವಂತೆ ಕೋರಿಕೊಂಡಿರುತ್ತಾರೆ. ಅದೇ ದಿನ ನಮ್ಮ ಇಲಾಖಾ ಮುಖ್ಯಸ್ಥರು ನನಗೆ ಸದರಿ ಹೃದಯವನ್ನು ಹಾಗೂ ಕೋರಿಕೆ ಪತ್ರವನ್ನು ನನಗೆ ನೀಡಿ, ಪರೀಕ್ಷೆ ನಡೆಸಿ ವರದಿ ನೀಡುವಂತೆ ಸೂಚಿಸಿರುತ್ತಾರೆ.

2. ನಾನು ಹೃದಯವನ್ನು ಪರೀಕ್ಷೆಗಾಗಿ ಪಡೆದುಕೊಂಡಾಗ, ಅದನ್ನು ಪ್ಲಾಸ್ಟಿಕ್ ಡಬ್ಬಿಯಲ್ಲಿ ಶೇಖರಿಸಿ, ಸೀಲು ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಸೀಲು ಕೋರಿಕೆ ಪತ್ರದೊಂದಿಗೆ ನೀಡಿದ ಮಾದರಿ ಮೊಹರಿಗೆ ತಾಳೆಯಾಗುತ್ತಿತ್ತು. ನಂತರ ನಾನು ಪ್ಲಾಸ್ಟಿಕ್ ಡಬ್ಬಿಯನ್ನು ತೆರೆದು ನೋಡಿದಾಗ, ಹೃದಯವನ್ನು ಫಾರ್ಮಲಿನ್ ಬಳಸದೇ ಶೇಖರಿಸಿದ ಕಾರಣ, ಅದು ಸ್ವಲ್ಪ ಕೊಳೆತ

ಸ್ಥಿತಿಯಲ್ಲಿದ್ದಂತೆ ಕಂಡುಬಂದಿರುತ್ತದೆ. ಹೃದಯವನ್ನು ಪರಿಶೀಲಿಸಿದಾಗ, ಈ ಕೆಳಗಿನಂತೆ ಕಂಡುಬಂದಿರುತ್ತದೆ.

Specimen of heart weighing –275 gms.

Anterior wall shows a lacerated stab wound measuring 7 X 2.5 X 2 cms rupturing the anterior wall and entering deep in to the chamber of the heart.

Lumen of left main coronary artery appears patent.

Dissection of left anterior descending coronary artery appears to be slightly obliterated.

Dissection of left circumflex coronary artery appears to be slightly narrowed.

Dissection of right coronary artery appears to be slightly obliterated.

Mitral valve circumference 7 cms in diameter and appears unremarkable.

Tricuspid valve circumference – 6.5 cms in diameter and appears unremarkable.

Left ventricular wall is 2.3 cms thick.

Left atrial wall thickness 0.5cms.

Right ventricular wall thickness 1.5 cm

Interventricular septum thickness–1.5cm

Serial sections of the anterior wall of the heart is unremarkable.

ಆನಂತರ ನಾನು ಹೃದಯವನ್ನು ಪರೀಕ್ಷಿಸಿದ ಬಗ್ಗೆ ವರದಿಯನ್ನು ನೀಡಿರುತ್ತೇನೆ. ನಾನು ಪರೀಕ್ಷಿಸಿದ ಪ್ರಕಾರ, ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುತ್ತೇನೆ.

1. Left anterior descending coronary artery showed atherosclerotic changes with calcification causing about 60% lumen obstruction and right coronary artery showed atherosclerotic changes with hyaline degenerative changes and calcification causing about 40% obstruction of the lumen.
2. Multiple sections from left ventricular wall, right ventricular wall and Interventricular septum showed autolytic changes.
3. Multiple sections from the margins of the lacerated stab wound over the anterior wall of the heart showed autolytic changes and as the specimen was not sent in formalin due to which, it was completely autolysed at the time of receiving, antemortem changes were not appreciated at the margins of the wound.

ಸಾಕ್ಷಿಯು ತಾನು ನೀಡಿದ ವರದಿಯನ್ನು ನಿಪಿ–75 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–75(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ತಮ್ಮ ಸಂಸ್ಥೆಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–76 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–**

3. ಪೊಲೀಸರು ಕಳುಹಿಸಿದ ಹೃದಯವನ್ನು ಫಾರ್ಮಲಿನ್‌ನಲ್ಲಿ ಸಂಸ್ಕರಿಸದ ಕಾರಣ, ಹೃದಯದಲ್ಲಿ ಕಂಡುಬಂದ ಗಾಯವನ್ನು ಸಾಯುವ ಪೂರ್ವದಲ್ಲಿ ಆದಂತಹ ಗಾಯ ಎಂದು ಹೇಳಲು ಬರುವುದಿಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ